ತುಂಗಾ ವಿದ್ಯಾವರ್ಧಕ ಸಂಘ (ರಿ,.)

# ತುಂಗಾ ಮಹಾವಿದ್ಯಾಲಯ

## ಆನಂದಗಿರಿ, ತೀರ್ಥಹಳ್ಳಿ–577432, ಶಿವಮೊಗ್ಗ ಜಿಲ್ಲೆ

# Annual Report 2018-19

### ಎಲ್ಲರಿಗೂ ನಮಸ್ಕಾರ

ತುಂಗಾ ಮಹಾವಿದ್ಯಾಲಯದ 52ನೇ ಶೈಕ್ಷಣಿಕ ವರ್ಷದ ವರದಿಯನ್ನು ತಮ್ಮ ಮುಂದಿಡಲು ಹರ್ಷಿಸುತ್ತೇನೆ. ಕುವೆಂಪು ವಿಶ್ವವಿದ್ಯಾನಿಲಯದಿಂದ ಶಾಶ್ವತ ಸಂಯೋಜನೆಯೊಂದಿಗೆ ಮತ್ತು ನ್ಯಾಕ್ ಸಂಸ್ಥೆಯಿಂದ 2.81/5 ಅಂಕಗಳನ್ನು ಪಡೆದು "ಬಿ" ಶ್ರೇಣಿಯನ್ನು ಪಡೆದಿರುವ ತುಂಗಾ ಮಹಾವಿದ್ಯಾಲಯವು ಮಲೆನಾಡಿನ ಪ್ರತಿಷ್ಠಿತ ವಿದ್ಯಾಸಂಸ್ಥೆಯಾಗಿ ಮಹಾವಿದ್ಯಾಲಯವಾಗಿ ಬೆಳೆದಿರುವುದು ಹೆಮ್ಮೆಯ ವಿಷಯ. ಇದರ ಹಿಂದೆ ಅನೇಕ ಹಿರಿಯರ ಶ್ರಮ–ಸಾಧನೆ–ತ್ಯಾಗ–ಆದರ್ಶಗಳಿವೆಯೆಂಬುದು ನಮ್ಮೆಲ್ಲರ ನೆನಪಿನಲ್ಲಿ ಸದಾ ಇರುವ ಸಂಗತಿಯೇ ಆಗಿದೆ.

2018–19ನೇ ಶೈಕ್ಷಣಿಕ ವರ್ಷದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಎಂ.ಕಾಂ. ವಿಭಾಗಕ್ಕೆ ಒಟ್ಟು 540 ವಿದ್ಯಾರ್ಥಿಗಳು ಪ್ರವೇಶಾತಿ ಪಡೆರುತ್ತಾರೆ. ಹುಡುಗರು ಸಂಖ್ಯೆ 225 ಮತ್ತು ಹುಡುಗಿಯರ ಸಂಖ್ಯೆ 315.

ಪ್ರಸಕ್ತ 2018–19ನೇ ಶೈಕ್ಷಣಿಕ ವರ್ಷದಲ್ಲಿ ಪದವಿ ವಿಭಾಗಕ್ಕೆ ಒಟ್ಟು 480 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಅದರಲ್ಲಿ ಹುಡುಗರ ಸಂಖ್ಯೆ 213 ಮತ್ತು ಹುಡುಗಿಯರ ಸಂಖ್ಯೆ 267. ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು 13, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು 08. ಹಾಗೆಯೇ ಸ್ನಾತಕೋತ್ತರ ವಿಭಾಗಕ್ಕೆ ಒಟ್ಟು 60 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು ಅದರಲ್ಲಿ 12 ಹುಡುಗರು ಮತ್ತು 48 ಹುಡುಗಿಯರೂ ಇದ್ದಾರೆ. ಇದರಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು 5 ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು 2. ಇದರಲ್ಲಿ ವಿಭಾಗವಾರು ಪ್ರವೇಶಾತಿ ಈ ರೀತಿ ಇದೆ.

| | | | |
|---|---|---|---|
| ಪ್ರಥಮ ಬಿ.ಎ. – 21 | ದ್ವಿತೀಯ ಬಿ.ಎ. – 25 | ತೃತೀಯ ಬಿ.ಎ. – 18 | 64 |
| ಪ್ರಥಮ ಬಿ.ಎಸ್ಸಿ. – 18 | ದ್ವಿತೀಯ ಬಿ.ಎಸ್ಸಿ. – 13 | ತೃತೀಯ ಬಿ.ಎಸ್ಸಿ. – 15 | 46 |
| ಪ್ರಥಮ ಬಿ.ಕಾಂ. – 134 | ದ್ವಿತೀಯ ಬಿ.ಕಾಂ. – 119 | ತೃತೀಯ ಬಿ.ಕಾಂ – 117 | 370 |
| ಪ್ರಥಮ ಎಂಕಾಂ – 25 | ದ್ವಿತೀಯ ಎಂಕಾಂ – 35 | | 60 |
| | | **ಒಟ್ಟು. . .** | **540** |

### <u>ಫಲಿತಾಂಶ</u>

ಪ್ರತಿ ವರ್ಷದಂತೆ ಈ ವರ್ಷವೂ ಕಾಲೇಜು ಉತ್ತಮ ಫಲಿತಾಂಶ ಪಡೆದಿದೆ. 2019ರ ಏಪ್ರಿಲ್/ಮೇ ನಲ್ಲಿ ನಡೆದ ಪರೀಕ್ಷೆಯಲ್ಲಿ ಬಿ.ಕಾಂ. ವಿಭಾಗದಲ್ಲಿ ಕು. ಅರವಟಿಗೆ ಎನ್ ದೀಕ್ಷಾ 7ನೇ ರ್‍ಯಾಂಕ್ 95.93% ಮತ್ತು ಕು. ಜ್ಯೋತಿ ಎಸ್ ಪ್ರಭು 9ನೇ ರ್‍ಯಾಂಕ್ 94.93% ಗಳಿಸಿದ್ದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. 52 ವರ್ಷಗಳ ಅವಧಿಯಲ್ಲಿ ನಮ್ಮ ಕಾಲೇಜು ಒಟ್ಟು 45 ರ್‍ಯಾಂಕ್‌ಗಳನ್ನು ಪಡೆದುಕೊಂಡಿದೆ.

**2018–19ರ ಪದವಿ ತರಗತಿಗಳ ಫಲಿತಾಂಶ**

| ಕ್ರ. ಸಂ | ತರಗತಿ | ಹಾಜರಾದವರು | ಉನ್ನತ ಶ್ರೇಣಿ | ಪ್ರಥಮ ಶ್ರೇಣಿ | ದ್ವಿತೀಯ ಶ್ರೇಣಿ | ಉತ್ತೀರ್ಣ | ಒಟ್ಟು ತೇರ್ಗಡೆ | ಶೇಕಡಾವಾರು |
|---|---|---|---|---|---|---|---|---|
| 1 | ಪ್ರಥಮ ಸೆಮ್ ಬಿಎ | 21 | | | | | 05 | 23.80% |
| 2 | ಎರಡನೇ ಸೆಮ್ ಬಿಎ | 20 | | | | | 05 | 25.00% |

## Result of all the Programmes in the Year 2018-2019.

| Sl. No | Programmes | Total Number of students appeared | Total students Passed | Passing Percentage |
|---|---|---|---|---|
| **1.** | **B.A** | | | |
| | I Sem | 21 | 5 | 23.80 % |
| | II Sem | 20 | 5 | 25 % |
| | III Sem | 25 | 9 | 36 % |
| | IV Sem | 23 | 6 | 26.08 % |
| | V Sem | 18 | 15 | 83.33 % |
| | VI Sem | 15 | 14 | 93.33 % |
| **2.** | **B.S.C** | | | |
| | I Sem | 18 | 11 | 61.11 % |
| | II Sem | 17 | 14 | 82.35 % |
| | III Sem | 13 | 12 | 92.30 % |
| | IV Sem | 13 | 11 | 84.61 % |
| | V Sem | 15 | 12 | 80. 0 % |
| | VI Sem | 15 | 11 | 73.33 % |
| **3.** | **B.Com** | | | |
| | I Sem | 126 | 96 | 76.19 % |
| | II Sem | 134 | 106 | 79.10 % |
| | III Sem | 119 | 83 | 69.74 % |
| | IV Sem | 125 | 99 | 79.20 % |
| | V Sem | 116 | 97 | 83.62 % |
| | VI Sem | 115 | 96 | 83.47 % |
| **4.** | **M.Com** | | | |
| | I Sem | 24 | 22 | 91.66 % |
| | II Sem | 24 | 24 | 100 % |
| | III Sem | 35 | 35 | 100 % |
| | IV Sem | 35 | 35 | 100 % |

## Result of the Final year out going Students: 2018-2019

| Total Students Appeared | | Total Students Passed | Passing percentage | Average percentage |
|---|---|---|---|---|
| **B.A** | 15 | 14 | **93.33 %** | |
| **B.S.C** | 15 | 11 | **73.33 %** | |
| **B.Com** | 115 | 96 | **83.47 %** | |
| **M.Com** | 35 | 35 | **100 %** | |
| | | | | |
| **Total** | **180** | **156** | **87.53** | |
| | | | | |

### Meritಗೆ ಪ್ರೋತ್ಸಾಹ

2018–19ನೇ ಸಾಲಿನಲ್ಲಿ ಪ್ರಥಮ ಬಿ.ಎಸ್ಸಿ. ಪ್ರವೇಶಾತಿಗೆ ಸಂಬಂಧಿಸಿದಂತೆ ಭೌತ ವಿಜ್ಞಾನ ವಿಭಾಗದ ಅಧ್ಯಾಪಕರುಗಳು ಶೇಕಡಾ 60%ಕ್ಕಿಂತ ಜಾಸ್ತಿ ಅಂಕ ಗಳಿಸಿರುವ ವಿದ್ಯಾರ್ಥಿಗಳ ಶುಲ್ಕವನ್ನು ಪಾವತಿಸಿ, ಪ್ರವೇಶಾತಿ ಹೆಚ್ಚಳಕ್ಕೆ ಪ್ರೋತ್ಸಾಹ ನೀಡಿರುತ್ತಾರೆ. ಅಂತೆಯೇ ಪ್ರಥಮ ಬಿಎಗೆ ಪ್ರವೇಶಾತಿಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಮಾನವಿಕ ಮತ್ತು ಭಾಷಾ ವಿಭಾಗದ ಅಧ್ಯಾಪಕರುಗಳೂ ವಿದ್ಯಾರ್ಥಿಗಳಿಗೆ ಪ್ರವೇಶಾತಿಯ ಸಂದರ್ಭದಲ್ಲಿ ಆರ್ಥಿಕ ಸಹಾಯವನ್ನು ನೀಡಿರುತ್ತಾರೆ. ಆಡಳಿತ ಮಂಡಳಿ ಶೇ 90ಕ್ಕಿಂತ ಜಾಸ್ತಿ ಅಂಕಗಳನ್ನು ಪಡೆದವರಿಗೆ ಪ್ರತಿ ವರ್ಷದಂತೆ ಈ ವರ್ಷವೂ ಪ್ರವೇಶ ಸಂದರ್ಭದಲ್ಲಿ ಅಭಿವೃದ್ಧಿ ಶುಲ್ಕ ಮನ್ನಾ ಮಾಡುವ ಮೂಲಕ ಪ್ರೋತ್ಸಾಹ ನೀಡಿದೆ ಹಾಗೂ ಆರ್ಥಿಕ ದುರ್ಬಲರಿಗೆ ರಿಯಾಯಿತಿ ನೀಡಿದೆ. ಗ್ರಂಥಾಲಯದಿಂದ ವಿಶೇಷ ಯೋಜನೆಯಡಿಯಲ್ಲಿ ಪುಸ್ತಕಗಳನ್ನು ನೀಡಲಾಗಿದೆ.

ಕಾಲೇಜಿನಲ್ಲಿ ಶೈಕ್ಷಣಿಕ ಚಟುವಟಿಕೆಗಳು ಸುಸೂತ್ರವಾಗಿ ನಡೆಯಲು ಈ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಪ್ರವೇಶ ಸಮಿತಿ, ಪರೀಕ್ಷಾ ಸಮಿತಿ, ಶಿಸ್ತುಪಾಲನಾ ಸಮಿತಿ, ಸಾಂಸ್ಕೃತಿಕ ಸಮಿತಿ, ಸ್ತ್ರೀ–ಸಬಲೀಕರಣ ಸಮಿತಿ, ರ್‍ಯಾಗಿಂಗ್ ನಿಗ್ರಹ ಮತ್ತು ಲೈಂಗಿಕ ಶೋಷಣೆ ನಿಗ್ರಹ ಸಮಿತಿ ಮೊದಲಾದ ಸಮಿತಿಗಳನ್ನು ರಚನೆ ಮಾಡಿ ಸಂಚಾಲಕರನ್ನು ಮತ್ತು ಸದಸ್ಯರುಗಳನ್ನು ನೇಮಿಸಲಾಯಿತು. ಸದರಿ ಸಮಿತಿಗಳು ಈ ಹಿನ್ನಲೆಯಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯನಿರ್ವಹಿಸಿವೆ.

### ಬೋಧಕ ಮತ್ತು ಬೋಧಕೇತರ ಸಿಬ್ಬಂದಿ

ಈ ಸಾಲಿನಲ್ಲಿ 53 ಬೋಧಕ ಮತ್ತು 17 ಬೋಧಕೇತರ ಸಿಬ್ಬಂದಿ ಕೆಲಸ ನಿರ್ವಹಿಸುತ್ತಿದ್ದಾರೆ. 12 ಬೋಧಕರು, 06 ಬೋಧಕೇತರರು ಸರ್ಕಾರದ ಅನುದಾನಿತ ಸಿಬ್ಬಂದಿಯವರಾಗಿರುತ್ತಾರೆ. ಆಡಳಿತ ಮಂಡಳಿಯಿಂದ ನೇಮಿಸಲ್ಪಟ್ಟವರು 41 ಅಧ್ಯಾಪಕರು, 11 ಅಧ್ಯಾಪಕೇತರರು. ಬೋಧಕೇತರ ಸಿಬ್ಬಂದಿಯವರಾದ ಶ್ರೀ ರಮೇಶ ನಾಯ್ಕ್ ಇವರು ದಿನಾಂಕ: 30.08.2019 ರಂದು ವಯೋನಿವೃತ್ತಿ ಹೊಂದಿರುತ್ತಾರೆ.

### ಎಂ.ಕಾಂ. ಕೋರ್ಸ್

ವಾಣಿಜ್ಯ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಬಿ.ಪ್ರಕಾಶ್‌ರಾವ್ ಅವರು ಎಂಕಾಂ ವಿಭಾಗದ ಕೋ–ಆರ್ಡಿನೇಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಶ್ರೀಮತಿ ವಿಮಲ ಬಿ.ಎಸ್. ಪೂರ್ಣಕಾಲಿಕ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಪಿಎಚ್‌ಡಿ ಅಧ್ಯಯನದಲ್ಲಿ ತೊಡಗಿದ್ದಾರೆ. ಶ್ರೀಮತಿ.ಅನುಷಾ.ಕೆ.ಎಸ್. ಅನುಪಾ.ಕೆ.ಎಂ, ಕು.ರಾಜಲಕ್ಷ್ಮಿ ಕೆ.ಆರ್, ಇವರು ಅರೆಕಾಲಿಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಡಾ.ಬಿ.ಟಿ.ರಾಮಪ್ಪನವರು ಅರ್ಥಶಾಸ್ತ್ರದ ಹೆಚ್ಚುವರಿ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

**3. ಅಧ್ಯಾಪಕರ ಶೈಕ್ಷಣಿಕ ಸಾಧನೆಯ ವಿವರಗಳು.**

ಡಾ.ಬಿ.ಗಣಪತಿಯವರು ಕುವೆಂಪು ವಿಶ್ವವಿದ್ಯಾನಿಲಯದ ಬಿಓಎಸ್ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಸಂಶೋಧನಾ ಮಾರ್ಗದರ್ಶಕರಾಗಿದ್ದು ಮೂವರು ಸಂಶೋಧನಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ತುಂಗಾ ಮಹಾವಿದ್ಯಾಲಯದ ಸ್ಥಾಪಕ ಅಧ್ಯಕ್ಷರಾದ ಡಾ.ಬಿ.ಎನ್.ರಂಗಪ್ಪನವರ ಕುರಿತು **"ಕರ್ಮಯೋಗಿ ಡಾ.ಬಿ.ಎನ್.ರಂಗಪ್ಪ"** ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ.

ಹಿರಿಯ ಪ್ರಾಧ್ಯಾಪಕರಾದ ಪ್ರೊ.ಬಿ.ಮಲ್ಲೇಶಿ ನಾಯ್ಕ್ ಇವರು ಬೆಂಗಳೂರು ವಿಶ್ವವಿದ್ಯಾನಿಯದ ಬಿಓಎಸ್ ಸದಸ್ಯರಾಗಿ, ಕುವೆಂಪು ವಿಶ್ವವಿದ್ಯಾನಿಯದ ಖಾಸಗಿ ಕಾಲೇಜು ಅಧ್ಯಾಪಕರ ಸಂಘದ ಅಧ್ಯಕ್ಷರಾಗಿ, ಕುವೆಂಪು ವಿಶ್ವವಿದ್ಯಾನಿಲಯದ ಸಿಡಿಸಿ ಸದಸ್ಯರಾಗಿ, ಕಾಲೇಜಿನ ರೆಡ್‌ಕ್ರಾಸ್, ಶಿಸ್ತು ಸಮಿತಿ, NAAC ಕೈಟೀರಿಯಾ 5ರ Infrastructure and Learning Resources ನ ಸಂಚಾಲಕರಾಗಿ ಹಾಗೂ ವಿದ್ಯಾರ್ಥಿ ಕ್ಷೇಮಪಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಡಾ.ಬಿ.ಟಿ.ರಾಮಪ್ಪನವರು ಕುವೆಂಪು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕರ ಸಂಘದ ಅಧ್ಯಕ್ಷರಾಗಿಯೂ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ತುಂಗಾ ಕಾಲೇಜು ಶಾಖೆಯ ಸಂಯೋಜಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ NAAC ಕೈಟೀರಿಯಾ 4ರ Student support and progression ನ ಸಂಚಾಲಕರಾಗಿದ್ದಾರೆ.

ಡಾ. ಹೆಚ್.ರಾಜಶೇಖರ್ ಅವರು NAAC ಕೈಟೀರಿಯಾ 3ರ Research, Consultancy & Extension ನ ಸಂಚಾಲಕರಾಗಿದ್ದಾರೆ. ಕಾಲೇಜಿನ ಮಧ್ಯಾಹ್ನದ ಉಚಿತ ಊಟದ ಯೋಜನೆಯ ಸಂಚಾಲಕರಾಗಿದ್ದಾರೆ.

ಡಾ.ಕೆ.ಅಂಜನಪ್ಪನವರು ಎನ್‌ಸಿಸಿ ಅಧಿಕಾರಿಯಾಗಿದ್ದು NAAC ಕೈಟೀರಿಯಾ 7ರ Institutional Values ನ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ಹಂಪಿ ವಿಶ್ವವಿದ್ಯಾಲಯದ ಸಂಶೋಧನಾ ಮಾರ್ಗದರ್ಶಕರಾಗಿ ಒಬ್ಬ ವಿದ್ಯಾರ್ಥಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ.

ಪ್ರೊ.ಎಲ್.ಕೆ.ನಟರಾಜ್ ಅವರು ಕುವೆಂಪು ವಿಶ್ವವಿದ್ಯಾಲಯದ ಇಂಗ್ಲೀಷ್ ವಿಭಾಗದ ಬಿಓಎಸ್ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದು, ಕಾಲೇಜಿನ ಐಕ್ಯೂಎಸಿ ಸಂಚಾಲಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಖ್ಯಾತ ವ್ಯಂಗ್ಯ ಚಿತ್ರಕಾರರಾಗಿರುವ ನಟರಾಜ್ ಅವರು ರಾಜ್ಯಮಟ್ಟದ ವ್ಯಂಗ್ಯಚಿತ್ರಕಾರರ ಸಂಘದ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಿದ್ದಾರೆ. ವ್ಯಂಗ್ಯಚಿತ್ರದಲ್ಲಿನ ಅವರ ಜೀವಮಾನದ ಸಾಧನೆ ಗುರುತಿಸಿ ಕುಂದಾಪುರದಲ್ಲಿ ನಡೆದ ಕಾರ್ಟೂನ್ ಹಬ್ಬದಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ. ತೀರ್ಥಹಳ್ಳಿ ತಾಲ್ಲೂಕಿನ ಶಾಲಾ ಕಾಲೇಜುಗಳಲ್ಲಿ ಆಸಕ್ತ ವಿದ್ಯಾರ್ಥಿಗಳಿಗೆ ಗ್ರಾಮರ್‌ಟೂನ್ ಎಂಬ ವಿಶಿಷ್ಟ ಕಾರ್ಯಕ್ರಮವನ್ನು ನಡೆಸಿಕೊಟ್ಟಿದ್ದಾರೆ. ವ್ಯಂಗ್ಯಚಿತ್ರ ರಚನೆಯ ಮೂಲಕ ತಾಲ್ಲೂಕಿನಾದ್ಯಂತ ಮತದಾರರ ಜಾಗೃತಿ ಮೂಡಿಸಿದ್ದಾರೆ.

ಡಾ.ಎಂ.ಎಸ್.ಮಂಜುನಾಥ್‌ರವರು ಕರ್ನಾಟಕ ಸರ್ಕಾರದಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆಯ ಮಾನ್ಯ ಸಚಿವರಾದ ಶ್ರೀ ಯು.ಟಿ.ಖಾದರ್ ಅವರ ವಿಶೇಷಾಧಿಕಾರಿಯಾಗಿದ್ದಾರೆ.

ಪ್ರೊ.ಕೆ.ಟಿ.ರಮೇಶ್ ಅವರು ಕಾಲೇಜಿನ ICT ಸಂಚಾಲಕರಾಗಿಯೂ NAAC ಕೈಟೀರಿಯಾ 6ರ Organisation and Management ನ ಸಂಚಾಲಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ರೂ–ಬ್ಯಾಂಕ್, ಸಂಚಾರಿ ಬಸ್ ವ್ಯವಸ್ಥೆಯ ಮತ್ತು ಮಾನವಿಕ ಸಂಘದ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಡಾ.ಆರ್.ಕುಮಾರಸ್ವಾಮಿಯವರು ಎನ್‌ಎಸ್‌ಎಸ್ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಕಾಲೇಜಿನ Voters Literary Club ನ ಸಂಚಾಲಕರಾಗಿದ್ದಾರೆ. ನೈನಿತಾಲ್‌ನಲ್ಲಿ ನಡೆದ ರಿಫ್ರೆಶರ್ ಕೋರ್ಸ್‌ನಲ್ಲಿ ಭಾಗವಹಿಸಿದ್ದು ಅಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪತ್ರಿಕೆ ಮಂಡಿಸಿದ್ದು ಅದು ISBN ಸಂಖ್ಯೆ ಹೊಂದಿರುವ ಪುಸ್ತಕದಲ್ಲಿ ಪ್ರಕಟವಾಗಿದೆ. ಎನ್‌ಆರ್ ಪುರದಲ್ಲಿ ಸರ್ಕಾರಿ ಪದವಿ ಕಾಲೇಜಿನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಕಸ್ತೂರಿಗಂಗನ್ ವರದಿಯ ಅವಲೋಕನದ ಪ್ರತಿಕೆ ಮಂಡಿಸಿದ್ದಾರೆ. NAAC ಕೈಟೀರಿಯಾ 2ರ Teaching – Learning & Evaluation ನ ಸಂಚಾಲಕರೂ ಆಗಿದ್ದಾರೆ. ಜೊತೆಗೆ AISHE ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಡಾ.ಎಂ.ನಾಗರಾಜ್ ಅವರು NAAC ಕ್ರೈಟೀರಿಯಾ 1ರ Curricular Aspects ನ ಸಂಚಾಲಕರಾಗಿದ್ದು ಕಾಲೇಜಿನ Placement Cell ನ ಸಂಚಾಲಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಈ ವರ್ಷ ಅವರು ಧಾರವಾಡ ವಿಶ್ವವಿದ್ಯಾನಿಲಯಕ್ಕೆ ಪ್ರಬಂಧ ಸಲ್ಲಿಸಿ ಗಣಿತಶಾಸ್ತ್ರ ವಿಷಯದಲ್ಲಿ ಪಿಹೆಚ್.ಡಿ. ಪದವಿ ಪಡೆದಿದ್ದಾರೆ. ಸದರಿ ಕುವೆಂಪು ವಿಶ್ವವಿದ್ಯಾಲಯದ ಬಿಓಇ ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ಡಾ. ಬಿ.ಜಿ. ದಿವ್ಯಮಣಿಯವರು ಕಾಲೇಜಿನ NAAC ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಮಹಿಳಾ ಸಬಲೀಕರಣ ಘಟಕದ ಸಂಚಾಲಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. IQAC ವಿಭಾಗದಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡು ಅದರ ಸಹಸಂಚಾಲಕರಾಗಿ ಕೆಲಸ ಮಾಡುತ್ತಿದ್ದಾರೆ.

ಪ್ರೊ. ಬಸವರಾಜ್ ಅವರು ಕುವೆಂಪು ವಿಶ್ವವಿದ್ಯಾನಿಲಯದ ಬಿಓಇ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀ ಸುದೀಪ್.ಡಿ., ಶ್ರೀ ಟಿ.ಆರ್.ಶರತ್, ಡಾ.ಬಿ.ಎಸ್.ನರೇಂದ್ರ, ಶ್ರೀ ಪ್ರಸಾದ್.ಹೆಚ್.ಯು. ಇವರುಗಳು KSET ಪರೀಕ್ಷೆಯಲ್ಲೂ ಶ್ರೀಮತಿ ಅನುಷಾ.ಕೆ.ಎಸ್. ಇವರು NET ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಶ್ರೀ ಅನುದೀಪ್.ವೈ.ಎಸ್. ಅವರು ಗ್ರಂಥಾಲಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದು KSET, NET ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಾರೆ. SWAYAm-NPTEL Local Chapter, NIRF ಸಂಚಾಲಕರಾಗಿ, Placement Cell ನ ಸದಸ್ಯರಾಗಿ ಹಾಗೂ ಹಾಸ್ಟೆಲ್ ವಾರ್ಡನ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಶ್ರೀಮತಿ ವಿಮಲಾ.ಬಿ.ಎನ್ ISSN ಪಬ್ಲಿಕೇಶನ್‌ನಲ್ಲಿ ಲೇಖನ ಪ್ರಕಟಿಸಿದ್ದು, ತಮ್ಮ ಪಿಹೆಚ್.ಡಿ. ಅಧ್ಯಯನದಲ್ಲಿ ಕೊನೆಯ ಹಂತದಲ್ಲಿದ್ದಾರೆ. ಕು. ಚೈತ್ರ.ಹೆಚ್.ವಿ. ಮತ್ತು ಕು. ಅಭಿಲಾಷ ಎಸ್ ಪ್ರಭು ಇವರು ಬಿ.ಎಡ್. ಪದವಿ ವ್ಯಾಸಂಗ ನಡೆಸಿದ್ದಾರೆ.

ಶ್ರೀ ನಂದನ್.ಎನ್.ಜಿ. ಅವರು ಕನ್ನಡ ಎಂ.ಎ. ಪದವಿಯಲ್ಲಿ ಕುವೆಂಪು ವಿಶ್ವವಿದ್ಯಾನಿಲಯದಿಂದ 7ನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ.

## ಗ್ರಂಥಾಲಯ ವಿಭಾಗ

ನಮ್ಮ ಕಾಲೇಜಿನ ಗ್ರಂಥಾಲಯ ಕುವೆಂಪು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಉತ್ತಮ ಪುಸ್ತಕ ಭಂಡಾರಗಳಲ್ಲೊಂದಾಗಿದೆ. 2018–19ನೇ ಸಾಲಿನಲ್ಲಿ ಒಟ್ಟು ಸುಮಾರು 52000ಕ್ಕೂ ಮಿಕ್ಕು ಗ್ರಂಥಗಳನ್ನು ಹೊಂದಿದ್ದು ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಲ್ಲಿ ಸಂಪೂರ್ಣವಾಗಿ Automation ಆಗಿದೆ. ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಐಡಿ ಕಾರ್ಡು ವಿತರಿಸಲಾಗಿದೆ. ವಿದ್ಯಾರ್ಥಿಗಳಿಗೆ **Toppers Book Bank Scheme** ನಲ್ಲಿ ವಿಭಾಗದ ಮುಖ್ಯಸ್ಥರು ಶಿಫಾರಸ್ಸು ಮಾಡಿದ Toppers ವಿದ್ಯಾರ್ಥಿಗಳಿಗೆ ಹಾಗೂ ಎಸ್‌ಸಿ, ಎಸ್‌ಟಿ Book Bank Scheme ನಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ನೀಡಾಲಾಗುತ್ತಿದೆ. ಇದರ ಜೊತೆಗೆ **"ಓದು ಮಂಚ", "ವರ್ತಮಾನದ ಚಿಂತನ"** ಹಾಗೂ ಗ್ರಂಥಾಲಯದ ಬಳಕೆದಾರರಿಗೆ ಉತ್ತೇಜಿಸುವ ಸಲುವಾಗಿ "Best Book User" ಪ್ರಶಸ್ತಿಯನ್ನು ವಿತರಿಸಲಾಗುತ್ತಿದೆ.

ಗ್ರಂಥಾಲಯ ಮಾಹಿತಿ ಕೇಂದ್ರದಲ್ಲಿ SWAYAM-NPTEL Online Course ಗಳನ್ನು ಪ್ರಾರಂಭಿಸಲಾಗಿದ್ದು Course ಗಳ MHRD ಯ ರಾಷ್ಟ್ರದ ಪ್ರತಿಷ್ಠಿತ ಸಂಸ್ಥೆಳಾದ IIT ಮತ್ತು IISC ಸಂಸ್ಥೆಗಳ ಪ್ರಾಧ್ಯಾಪಕರು ಉಪನ್ಯಾಸವನ್ನು Video Text ನ ಮೂಲಕ ನೀಡಲಾಗುತ್ತಿದೆ. ಹಾಗೆಯೇ ನಮ್ಮ ಗ್ರಂಥಾಲಯ ಮಾಹಿತಿ ಕೇಂದ್ರದಿಂದ NIRF ರಿಜಿಸ್ಟ್ರೇಷನ್ ಆಗಿದ್ದು NIRF ರಾಷ್ಟ್ರದ ಪ್ರತಿಷ್ಠಿತ ಸಂಸ್ಥೆಗಳಿಗೆ ನೀಡಲಾದ ರ್‍ಯಾಂಕ್ ಆಗಿರುತ್ತದೆ. ಇದು MHRD ಯಿಂದ ನೀಡಲಾಗುತ್ತಿದೆ. ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಿಂದ ಕಂಪ್ಯೂಟರ್ ಮತ್ತು Internet ಸೌಲಭ್ಯವನ್ನು ನೀಡುತ್ತಿದ್ದು ವಿದ್ಯಾರ್ಥಿಗಳಿಗೆ Online ನಲ್ಲಿ ದೊರೆಯುವ ಮಾಹಿತಿಯನ್ನು ಸಂಗ್ರಹಿಸಲು ಅನುಕೂಲಕರವಾಗಿದೆ. NTA ಯಿಂದ ನಡೆಸಲಾಗುವ Computer Based Test ಗೆ Computer ತರಬೇತಿಯ ಅವಶ್ಯಕತೆಯಿರುತ್ತದೆ. ಇಂತಹ ತರಬೇತಿಗೆ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಿಂದ Computer Mock ಗೆ ಅವಕಾಶ ಮಾಡಿಕೊಡಲಾಗುತ್ತಿದೆ. Mock Test ಪಡೆಯಬೇಕೆಂದರೆ NTA ವೆಬ್‌ಸೈಟ್‌ಗೆ ಭೇಟಿ ನೀಡಿ ಕಾಲೇಜಿನ ಆಯ್ಕೆಯನ್ನು ಪಡೆಯಬೇಕಾಗಿರುತ್ತದೆ.

## ಯುಜಿಸಿ ಅನುದಾನ

**1. ವಿದ್ಯಾರ್ಥಿನಿಯರ ಹಾಸ್ಟೆಲ್ ನಿರ್ಮಾಣದ ಬಗ್ಗೆ :**

ಸುಮಾರು 2.25ಕೋಟಿ ರೂಗಳ ಅಂದಾಜು ವೆಚ್ಚದ ವಿದ್ಯಾರ್ಥಿನಿಯರ ಹಾಸ್ಟೆಲ್ ನಿರ್ಮಾಣಕ್ಕೆ ಯುಜಿಸಿಯಿಂದ ರೂ.60 ಲಕ್ಷ ಮಂಜೂರಾಗಿದ್ದು ಈಗಾಗಲೇ 31 ಲಕ್ಷ ರೂ ಬಿಡುಗಡೆಗೊಂಡು ಖರ್ಚಾಗಿರುತ್ತದೆ. ಇನ್ನು ಬರಬೇಕಾಗಿರುವ 30 ಲಕ್ಷ ರೂಪಾಯಿ ಯುಜಿಸಿ ಅನುದಾನ ಹೊರತು ಪಡಿಸಿ ಸುಮಾರು 1.50 ಕೋಟಿಗೂ ಹೆಚ್ಚು ಸಂಪನ್ಮೂಲವನ್ನು ಆಡಳಿತ ಮಂಡಳಿ ವತಿಯಿಂದ ಕ್ರೋಢೀಕರಿಸಬೇಕಾಗಿದ್ದು ಕಾಮಗಾರಿಯು ಪೂರ್ಣಗೊಂಡು ಲೋಕಾರ್ಪಣೆಗೊಂಡಿದ್ದು, ತಮಗೆಲ್ಲಾ ತಿಳಿದೇ ಇದೆ. ರೂಮುಗಳಿಗೆ ಪೀಠೋಪಕರಣ ಹಾಗೂ ನಿಲಯಕ್ಕೆ ಉದ್ಯಾನ, ಕಾಂಪೌಂಡ್ ನಿರ್ಮಿಸುವ ಕೆಲಸವೂ ಮುಗಿದಿದೆ. ಯುಜಿಸಿ ಯಿಂದ ವಸತಿ ನಿಲಯದ ಪ್ರಗತಿ ಪರಿಶೀಲನೆ ನಡೆದು ಬಾಕಿ 3000000.00 ರೂಪಾಯಿಗಳಲ್ಲಿ 2228000.00 ರೂಪಾಯಿಗಳುಬಂದಿದ್ದು ಉಳಿದ ಕೆಲಸ ಮುಗಿಸಬೇಕಾಗಿದೆ.

**2. ಮೈನರ್ ರಿಸರ್ಚ್ ಪ್ರಾಜೆಕ್ಟ್ :**

ಡಾ.ಬಿ.ಜಿ ದಿವ್ಯಮಣಿ ಇವರು ಪ್ರಸಕ್ತ ಮೈನರ್ ರಿಸರ್ಚ್ ಪ್ರಾಜೆಕ್ಟ್‌ನಲ್ಲಿ ಈ ವರ್ಷ ಮುಗಿಸಿರುತ್ತಾರೆ. ಡಾ.ಆರ್.ಕುಮಾರಸ್ವಾಮಿ, ಪ್ರೊ.ಎಲ್.ಕೆ ನಟರಾಜ್ ಮತ್ತು ಡಾ.ಬಿ.ಗಣಪತಿಯವರು ಮೈನರ್ ರಿಸರ್ಚ್ ಪ್ರಾಜೆಕ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

**ವಿದ್ಯಾರ್ಥಿ ವೇತನ:** ವಿದ್ಯಾರ್ಥಿಗಳಿಗೆ 2018–19ನೇ ಸಾಲಿನಲ್ಲಿ ವಿವಿಧ ವಿದ್ಯಾರ್ಥಿ ವೇತನಗಳನ್ನು ಈ ಕೆಳಕಂಡಂತೆ ಪಾವ್ತಿಸಲಾಗಿದೆ.

| ವಿದ್ಯಾರ್ಥಿವೇತನ | ವಿದ್ಯಾರ್ಥಿಗಳು | ತಲಾವಾರು | ಮಂಜೂರಾದ ಮೊತ್ತ ರೂ. |
|---|---|---|---|
| **ಪದವಿ ವಿಭಾಗ** | | | |
| ಬಿಸಿಎಂ ವಿ.ವೇ | 234 | | 920740.00 |
| ಸರ್.ಸಿ.ವಿ ರಾಮನ್ | 03 | 5000 | 15000.00 |
| ಎಸ್‌ಸಿ/ಎಸ್‌ಟಿ | 17 | | 89955.00 |
| ವಿಜ್ಞಾನ ಮತ್ತು ತಂತ್ರಜ್ಞಾನ | | | |
| ಸಂಚಿಹೊನ್ನಮ್ಮ ವಿದ್ಯಾರ್ಥಿ ವೇತನ | 59 | 2000 | 118000.00 |

**ವಿಶೇಷ** : ಕಾಲೇಜಿನ ಹಳೆಯ ವಿದ್ಯಾರ್ಥಿಯಾದ ಬಿ.ಆರ್‌ಸಿದ್ದಪ್ಪ ಇವರು ಕಳೆದ 2 ವರ್ಷಗಳಿಂದ ಬಿಕಾಂ ವಿಭಾಗದಲ್ಲಿ ಅಧ್ಯಯನ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿ ಗಣೇಶ್ ಇವರ ಪೂರ್ಣ ಖರ್ಚುವೆಚ್ಚಗಳನ್ನು ಭರಿಸುತ್ತಿದ್ದು ವರ್ಷಕ್ಕೆ 10,000 ರೂಪಾಯಿಗಳಂತೆ ನೀಡುತ್ತಿದ್ದಾರೆ.

**ಮಧ್ಯಾಹ್ನದ ಉಚಿತ ಊಟದ ಯೋಜನೆ:** ಡಾ॥ ಬಿ.ಎನ್.ರಂಗಪ್ಪ ಮತ್ತು ಡಾ॥ ಕೆ.ರಾಮ ಭಟ್‌ರವರ ಹೆಸರಿನಲ್ಲಿರುವ ದತ್ತಿ ನಿಧಿಯಿಂದ ದೂರದ ಹಳ್ಳಿಗಳಿಂದ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಂದ ಬರುವ ವಿದ್ಯಾರ್ಥಿಗಳಿಗಾಗಿ ರೂಪಿಸಲಾದ ಈ ಯೋಜನೆಯನ್ನು ಕಳೆದ 10 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ. 2017–18ನೇ ಸಾಲಿನಲ್ಲಿ ಒಟ್ಟು 84 ವಿದ್ಯಾರ್ಥಿಗಳು ಈ ಯೋಜನೆಯ ಲಾಭ ಪಡೆದಿರುತ್ತಾರೆ. ಪ್ರಸಕ್ತ 2018–19ನೇ ಸಾಲಿನಲ್ಲಿ ಈ ಯೋಜನೆಯನ್ನು ಮುಂದುವರೆಸಿಕೊಂಡು ಬರಲಾಗಿದ್ದು, ಒಟ್ಟು ಆಯ್ದು ಪದವಿಯ 52, ಪದವಿ–ಪೂರ್ವ ವಿಭಾಗದ 24, ಸ್ನಾತಕೋತ್ತರ ವಿಭಾಗದ 5 (ಒಟ್ಟು 81) ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ. ಈ ಯೋಜನೆಯು ಆಡಳಿತ ಮಂಡಳಿ ಸದಸ್ಯರು, ಅಧ್ಯಾಪಕರು ಮತ್ತು ವಿದ್ಯಾಭಿಮಾನಿ ಸಾರ್ವಜನಿಕರ ಉದಾರ ದೇಣಿಗೆಯಿಂದ ಯಶಸ್ವಿಯಾಗಿ ನಡೆಯುತ್ತಿದೆ.

**ಪಠ್ಯೇತರ ಚಟುವಟಿಕೆಗಳ ಸಾಧನೆ ವಿವರ:**

### 1.ಕ್ರೀಡಾ ಸಾಧನೆ.

ಕ್ರೀಡಾ ನಿರ್ದೇಶಕರಾದ ಶ್ರೀ ಟಿ.ಆರ್.ಶರತ್ ಇವರ ನಿರ್ದೇಶನದಲ್ಲಿ ನಡೆದ ಕ್ರೀಡಾ ವಿಶೇಷತೆಗಳು

ದಿನಾಂಕ:05.09.2018 ರಿಂದ 06.09.2018ರ ವರೆಗೆ ಕುವೆಂಪು ವಿಶ್ವವಿದ್ಯಾಲಯದ ಅಂತರ ಕಾಲೇಜು ಮಟ್ಟದ ಪುರುಷ ಮತ್ತು ಮಹಿಳಾ Weight lifting, Power lifting ಮತ್ತು ಪುರುಷರ ದೇಹದಾರ್ಢ್ಯ ಸ್ಪರ್ಧೆಯು ಶ್ರೀ ಎಂ.ವಿ. ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿಯಲ್ಲಿ ನಡೆಯಿತು. ಅದರಲ್ಲಿ ನಮ್ಮ ಕಾಲೇಜಿನ 15 ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿ ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ.

ದಿನಾಂಕ:01.01.2019 ರಿಂದ 02.01.2019 ರ ವರೆಗೆ ಕುವೆಂಪು ವಿಶ್ವವಿದ್ಯಾಲಯ ಅಂತರ ಕಾಲೇಜು ಮಟ್ಟದ ಮಹಿಳಾ ಸಾಫ್ಟ್‌ಬಾಲ್ ಕ್ರೀಡಾಕೂಟವು ಸಾಗರದ ಶ್ರೀಮತಿ ಇಂದಿರಾ ಗಾಂಧಿ ಮಹಿಳಾ ಕಾಲೇಜಿನಲ್ಲಿ ನಡೆಯಿತು. ಈ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ 12 ವಿದ್ಯಾರ್ಥಿನಿಯರು ಭಾಗವಹಿಸಿ ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ದಿನಾಂಕ: :01.01.2019 ರಿಂದ 02.01.2019 ರ ವರೆಗೆ ಕುವೆಂಪು ವಿಶ್ವವಿದ್ಯಾಲಯ ಅಂತರ ಕಾಲೇಜು ಮಟ್ಟದ ಮಹಿಳಾ ವಾಲಿಬಾಲ್ ಕ್ರೀಡಾಕೂಟವು ಸಾಗರದ ಶ್ರೀಮತಿ ಇಂದಿರಾ ಗಾಂಧಿ ಮಹಿಳಾ ಕಾಲೇಜಿನಲ್ಲಿ ನಡೆಯಿತು. ಈ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ 11 ವಿದ್ಯಾರ್ಥಿನಿಯರು ಭಾಗವಹಿಸಿ ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ದಿನಾಂಕ: :26.02.2019 ರಿಂದ 27.02.2019 ರ ವರೆಗೆ ಕುವೆಂಪು ವಿಶ್ವವಿದ್ಯಾಲಯ ಅಂತರ ಕಾಲೇಜು ಮಟ್ಟದ ಪುರುಷರ ಸಾಫ್ಟ್‌ಬಾಲ್ ಕ್ರೀಡಾಕೂಟವು ಶಿಕಾರಿಪುರದ ಸರ್ಕಾರಿ ಪದವಿ ಕಾಲೇಜಿನಲ್ಲಿ ನಡೆಯಿತು. ಈ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ 14 ಕ್ರೀಡಾಪಟುಗಳು ಭಾಗವಹಿಸಿ ತೃತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ದಿನಾಂಕ:28.09.2019, 29.09.2019 ಮತ್ತು 30.09.2019 ರಂದು ಶಿವಮೊಗ್ಗದ ಆಚಾರ್ಯ ತುಳಸಿ ರಾಷ್ಟ್ರೀಯ ಕಾಲೇಜಿನಲ್ಲಿ ನಡೆದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಈ ಕೆಳಗಿನ ವಿದ್ಯಾರ್ಥಿಗಳು ಬಹುಮಾನ ಗಳಿಸಿರುತ್ತಾರೆ.

| ಕ್ರ.ಸಂ. | ಕ್ರೀಡಾಪಟುಗಳ ಹೆಸರು | ತರಗತಿ | ಅಥ್ಲೆಟಿಕ್ಸ್ | ಪದಕ |
|---|---|---|---|---|
| 1 | ಸೆಫಿನ್ ಬಾಬು | ತೃ.ಬಿ.ಕಾಂ. | Polo Vault | ಬಂಗಾರದ ಪದಕ |
| 2 | ವಿಶ್ವಾಸ್.ಎಸ್ | ತೃ.ಬಿ.ಕಾಂ. | 4×400 m relay | ಕಂಚಿನ ಪದಕ |
| 3 | ಆದಿತ್ಯ.ಎ.ಎಸ್. | ತೃ.ಬಿ.ಕಾಂ. | 4×400 m relay | ಕಂಚಿನ ಪದಕ |
| 4 | ಸುಮಂತ್.ಎಸ್. | ದ್ವಿ.ಬಿ.ಕಾಂ. | 4×400 m relay | ಕಂಚಿನ ಪದಕ |
| 5 | ಸಚಿನ್ ಎಸ್ ಹೊನ್ನಾನಿ | ತೃ.ಬಿ.ಎ. | 4×400 m relay | ಕಂಚಿನ ಪದಕ |
| 6 | ಸಚಿನ್ ಎಸ್ ಹೊನ್ನಾನಿ | ತೃ.ಬಿ.ಎ. | 1500 m race | ಕಂಚಿನ ಪದಕ |
| 7 | ಸುಮಂತ್.ವೈ.ಎಸ್. | ತೃ.ಬಿ.ಕಾಂ. | 110 m hurdles | ಕಂಚಿನ ಪದಕ |

**ರಾಷ್ಟ್ರ ಮಟ್ಟದ ಕ್ರೀಡಾಕೂಟ**

2018–19ನೇ ಸಾಲಿನಲ್ಲಿ ಕುವೆಂಪು ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳ ವಿವರ:

| ಕ್ರ. ಸಂ. | ಕ್ರೀಡಾಪಟುಗಳ ಹೆಸರು | ತರಗತಿ | ವಿಭಾಗ | ಎಲ್ಲಿ |
|---|---|---|---|---|
| 1 | ನಂದಿತಾ.ಎಸ್ | ತೃ.ಬಿ.ಕಾಂ. | ಬಾಲ್‌ಬ್ಯಾಡ್‌ಮಿಟನ್ | ಆಂಧ್ರಪ್ರದೇಶ |
| 2 | ನಿವೇದಿತಾ.ಎಸ್. | ತೃ.ಬಿ.ಕಾಂ. | ಬಾಲ್‌ಬ್ಯಾಡ್‌ಮಿಟನ್ | ಆಂಧ್ರಪ್ರದೇಶ |
| 3 | ಮನಿಷಾ.ಎಂ.ಆರ್. | ದ್ವಿ.ಎಂ.ಕಾಂ. | ಸಾಫ್ಟ್‌ಬಾಲ್ | ಕೇರಳ |
| 4 | ಸೆಫಿನ್ ಬಾಬು | ತೃ.ಬಿ.ಕಾಂ. | ಸಾಫ್ಟ್‌ಬಾಲ್ | ಮಹಾರಾಷ್ಟ್ರ |

**2.ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) :**

ಕಳೆದ ವರ್ಷಾವಧಿಯಲ್ಲಿ ಡಾ.ಆರ್ ಕುಮಾರಸ್ವಾಮಿ ಮತ್ತು ಶ್ರೀ ಎನ್.ಟಿ ಜಯಾನಂದ ಎನ್‌ಎಸ್‌ಎಸ್ ಅಧಿಕಾರಿಗಳಾಗಿ ತೀರ್ಥಹಳ್ಳಿ ಸಮೀಪದ ಕೋಮನೆಯಲ್ಲಿ ವಿಶೇಷ ಸೇವಾ ಶಿಬಿರ ನಡೆಸಿದ್ದರು. ಈ ವರ್ಷದಲ್ಲಿ ಶ್ರೀ ಎಚ್.ಎಂ ಕೃಷ್ಣಮೂರ್ತಿಯವರಿಂದ 'ಯೋಗಪ್ರದರ್ಶನ ಮತ್ತು ಮಾಹಿತಿ', ಪೋಲೀಸ್ ಇಲಾಖೆಯೊಂದಿಗೆ 'ಅಂತರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ', ಶ್ರೀ ಅಥಣಿ ಬಸವರಾಜ್‌ರವರಿಂದ 'ಗಣಿತ ಚಮತ್ಕಾರ', ಯುವಸ್ಪಂದನ, ಶಿವಮೊಗ್ಗ ಇವರ ವತಿಯಿಂದ 'ಜೀವನ ಕೌಶಲ್ಯ' ಕಾರ್ಯಕ್ರಮಗಳು ನಡೆದವು. ವಿದ್ಯಾರ್ಥಿಗಳು ನ್ಯಾಚುರೋಪತಿ & ಯೋಗಿಕ್ ಸೈನ್ಸ್ ಕಾಲೇಜ್ ಉಜಿರೆಯಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆ, ಕುವೆಂಪು ವಿವಯಲ್ಲಿ ನಡೆದ ವಿವಿ ಮಟ್ಟದ ಎನ್‌ಎಸ್‌ಎಸ್ ಶಿಬಿರ,ಕೋಮನೆಯಲ್ಲಿ ಗದ್ದೆಯಲ್ಲಿ ಭತ್ತದ ಪೈರು ನಾಟಿ, ಅರಣ್ಯ ಇಲಾಖೆಯ ಸಹಯೋಗದಲ್ಲಿ ಭಾರತೀಪುರದಲ್ಲಿ ಸೀಡ್‌ಬಾಲ್ ಬಿತ್ತುವಿಕೆ, ಗಾಂಧೀಜಯಂತಿಯಂದು ಸ್ವಚ್ಛತಾ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

**3. ಎನ್‌ಸಿಸಿ (ರಾಷ್ಟ್ರೀಯ ಯುವ ಸೇವಾದಳ) :** 4B/20COY SD/SW Army Wing, ತುಂಗಾ ಮಹಾವಿದ್ಯಾಲಯದ ಎನ್.ಸಿ.ಸಿ ವಿಭಾಗದಲ್ಲಿ ಗಂಡು 40 ಹೆಣ್ಣು 16 ಒಟ್ಟು 56 ಕೆಡೆಟ್‌ಗಳಿದ್ದಾರೆ. ಡಾ.ಮೇಜರ್ ಆಂಜನಪ್ಪ ಅವರು ಎನ್‌ಸಿಸಿ ಅಧಿಕಾರಿಯಾಗಿದ್ದಾರೆ. ಬೆಟಾಲಿಯನ್ ಮಟ್ಟದ ಗ್ರೂಪ್ ಕ್ಯಾಂಪ್ ಜೂನ್ 19ರಿಂದ 28ರ ವರೆಗೆ ಕುವೆಂಪು ವಿವಿ ಶಂಕರಘಟ್ಟದಲ್ಲಿ ನಡೆದಿದ್ದು 26 ಜನ ವಿದ್ಯಾರ್ಥಿಗಳು, ಜುಲೈ 11ರಿಂದ 20ರ ವರೆಗೆ ಟಿಎಸ್‌ಸಿ ಕ್ಯಾಂಪ್‌ನಲ್ಲಿ 14 ಕೆಡೆಟ್‌ಗಳು ಭಾಗವಹಿಸಿರುತ್ತಾರೆ. ಇದೇ ತಿಂಗಳ 23ರಂದು ಬೆಳಗಾಂನಲ್ಲಿ ನಡೆಯಲಿರುವ Trekking ಕ್ಯಾಂಪ್‌ನಲ್ಲಿ 03 ಕೆಡೆಟ್‌ಗಳು ಭಾಗವಹಿಸಲಿದ್ದಾರೆ. ದಿನಾಂಕ:25.11.2018ರಂದು ಕಾಲೇಜಿನಲ್ಲಿ ಎನ್‌ಸಿಸಿ ಡೇ ಆಚರಿಸಲಾಯಿತು. ಕುವೆಂಪು ವಿಶ್ವವಿದ್ಯಾಲಯದ ಆವರಣದಲ್ಲಿ ದಿನಾಂಕ:19.06.2018 ರಿಂದ 28.06.2018ರ ವರೆಗೆ 20

Kar Bn NCC ಶಿವಮೊಗ್ಗ ಸಹಯೋಗದಲ್ಲಿ ನಡೆದ ಸಂಯುಕ್ತ ವಾರ್ಷಿಕ ಶಿಬಿರ (CATC) ಯಲ್ಲಿ ನಮ್ಮ ಕಾಲೇಜಿನಿಂದ ನಾನು ಹಾಗೂ 17 ಹುಡುಗರು, 05 ಹುಡುಗಿಯರು ಭಾಗವಹಿಸಿದ್ದೇವೆ.

1. ದಿನಾಂಕ:10.02.2018ರಂದು ಶಿವಮೊಗ್ಗದಲ್ಲಿ 'B' Certificate ಪರೀಕ್ಷೆಗೆ ನಮ್ಮ ಕಾಲೇಜಿನಿಂದ 12 ಹುಡುಗರು, 06 ಹುಡುಗಿಯರು ಹಾಜರಾಗಿದ್ದು, ಅದರಲ್ಲಿ 10 ಹುಡುಗುರು, 06 ಹುಡುಗಿಯರು ಉತ್ತೀರ್ಣರಾಗಿರುತ್ತಾರೆ.
2. ದಿನಾಂಕ:25.02.2018ರಂದು ಶಿವಮೊಗ್ಗದಲ್ಲಿ ನಡೆದ 'C' Certificate ಪರೀಕ್ಷೆಗೆ ನಮ್ಮ ಕಾಲೇಜಿನಿಂದ 03 ಕೆಡೆಟ್‌ಗಳು ಹಾಜರಾಗಿದ್ದು, ಅವರೆಲ್ಲರೂ ಉತ್ತೀರ್ಣರಾಗಿರುತ್ತಾರೆ.
3. ಕಾಲೇಜಿನ ಎನ್‌ಸಿಸಿ ವಿಭಾಗದ ನೇತೃತ್ವದಲ್ಲಿ 15.08.2018ರ ಸ್ವಾತಂತ್ರ ದಿನೋತ್ಸವ ಹಾಗೂ 26.11.2018ರಂದು ಗಣ ರಾಜ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು.

**4.ರೆಡ್‌ಕ್ರಾಸ್, ರೇಂಜರ್ಸ್ & ರೋವರ್ಸ್:**

2018–19ನೇ ಸಾಲಿನಲ್ಲಿ ರೋವರ್ಸ್ ಪಡೆಗೆ ಪ್ರಥಮ ಬಿ.ಕಾಂ.ನ 9 ವಿದ್ಯಾರ್ಥಿಗಳನ್ನು ನೊಂದಾಯಿಸಿಕೊಳ್ಳಲಾಯಿತು. ನಂತರ ಆ ವಿದ್ಯಾರ್ಥಿಗಳನ್ನು ಕರೆದು ರೋವರ್ಸ್ ಪಡೆಯ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ವಿವರಿಸಲಾಯಿತು. ಜುಲೈ/ಆಗಸ್ಟ್ ತಿಂಗಳಲ್ಲಿ ವಿಪರೀತ ಮಳೆಯಿಂದ ಪಟ್ಟಣದ ಹಲವು ಭಾಗಗಳಲ್ಲಿ ನಮ್ಮ ರೋವರ್ಸ್ ಪಡೆಯ ವಿದ್ಯಾರ್ಥಿಗಳು ಹಲವು ಜನರಿಗೆ ಸಹಾಯ ಮಾಡುವ ಮೂಲಕ ತಮ್ಮ ಕರ್ತವ್ಯವನ್ನು ತೋರಿಸಿಕೊಟ್ಟರು.

**5. ಸಾಂಸ್ಕೃತಿಕ ಸಾಹಿತ್ಯಕ ಕಾರ್ಯಕ್ರಮದ ವಿವರಗಳು.**

ನಮ್ಮ ಕಾಲೇಜಿನಲ್ಲಿ ಸ್ವಾತಂತ್ರೋತ್ಸವ ಪ್ರಯುಕ್ತ ಆಶುಭಾಷಣ, ದೇಶಭಕ್ತಿ ಗೀತೆ, ರಂಗೋಲಿ ಹಾಗೂ ಪ್ರಬಂಧ ಸ್ಪರ್ಧೆಗಳನ್ನು ನಡೆಸಲಾಯಿತು. ಈ ಸ್ಪರ್ಧೆಯಲ್ಲಿ ಪ್ರಥಮ ದ್ವಿತೀಯ ಹಾಗೂ ತೃತೀಖಯ ಸ್ಥಾನ ಪಡೆದವರಿಗೆ ಕಾಲೇಜು ವತಿಯಿಂದ ಪ್ರಶಸ್ತಿ ನೀಡಲಾಯಿತು.

ದಿನಾಂಕ:19.01.2018 ರಿಂದ ದಿನಾಂಕ:21.01.2018ರ ಮೂರು ದಿನಗಳ ಕಾಲ ಸಾಗರದ ಎಲ್.ಬಿ.ಕಾಲೇಜಿನಲ್ಲಿ ನಡೆದ ಜಿಲ್ಲಾ ಮಟ್ಟದ ವಿದ್ಯಾರ್ಥಿ ನಾಟಕ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು **'ಕಾಕನ ಕೋಟೆ'** ನಾಟಕವನ್ನು ಪ್ರದರ್ಶಿಸಿ ಅತ್ಯುತ್ತಮ ನಾಟಕ, ಅತ್ಯುತ್ತಮ ನಿರ್ದೇಶನ, ಅತ್ಯತ್ತಮ ಸಂಗೀತ ಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಬಹುಮಾನದ ಮೊತ್ತ 25000.00 ರೂಪಾಯಿಗಳು.

ದಿನಾಂಕ:29.01.2018 ರಂದು ಶಿವಮೊಗ್ಗದ ರಂಗಾಯಣದಲ್ಲಿ ನಡೆದ **'ಕಾಲೇಜು ರಂಗೋತ್ಸವ'** ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ತಂಡವು ಭಾಗವಹಿಸಿ **'ಸತ್ಯ ಹರಿಶ್ಚಂದ್ರ'** ನಾಟಕವನ್ನು ಅಭಿನಯಿಸಿ ಪ್ರಥಮ ಸ್ಥಾನ ಪಡೆದು **'ವಿಭಾಗ ಮಟ್ಟಕ್ಕೆ'** ಆಯ್ಕೆಯಾಗಿ ಪ್ರದರ್ಶನ ನೀಡಿರುತ್ತಾರೆ.

ದಿನಾಂಕ:16.02.2018ರಂದು ಶಿವಮೊಗ್ಗದ ಜೆ.ಎನ್.ಎನ್.ಸಿ.ಯಲ್ಲಿ ನಡೆದ **'ಉತ್ಥಾನ–2018'** ಅಂತರ್ ಕಾಲೇಜು ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ, ಪಾಶ್ಚಾತ್ಯ ನೃತ್ಯ ಸಮೂಹದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ದಿನಾಂಕ:28.02.2018ರಂದು ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ನಡೆದ **'ಶೃಂಗ ಸಂಭ್ರಮ–2018'** ಅಂತರ್ ಕಾಲೇಜು ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ, ಭರತನಾಟ್ಯ, ಪಾಶ್ಚಾತ್ಯ ನೃತ್ಯ (ವೈಯಕ್ತಿಕ) ವಿಭಾಗದಲ್ಲಿ ದ್ವಿತೀಯ ಸ್ಥಾನ, ಸಮೂಹ ನೃತ್ಯದಲ್ಲಿ ದ್ವಿತೀಯ ಸ್ಥಾನ, ಪ್ರಹಸನದಲ್ಲಿ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ.

ಈ ವಿಭಾಗದ ಜವಾಬ್ದಾರಿಯನ್ನು ಡಾ.ಬಿ.ಎಸ್.ನರೇಂದ್ರ, ಸಂಸ್ಕೃತ ವಿಭಾಗದ ಅಧ್ಯಾಪಕರು ಇವರು ವಹಿಸಿದ್ದರು.

**6. ಕಾಲೇಜಿನಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳ ವಿವರ :**

12.01.2019 :– ಸ್ವಾಮಿ ವಿವೇಕಾನಂದರ ಜಯಂತಿ ಆಚರಣೆ ಕಾರ್ಯಕ್ರಮ, ವಿಶೇಷ ಉಪನ್ಯಾಸ ಡಾ.ಬಿ.ಗಣಪತಿ,ಪ್ರಾಂಶುಪಾಲರು, ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ. ಉಪಸ್ಥಿತಿ ಪ್ರೊ.ಬಿ.ಮಲ್ಲೇಶಿನಾಯ್ಕ್, ವಿದ್ಯಾರ್ಥಿ ಕ್ಷೇಮಪಾಲಕರು, ತುಂಗಾ ಮಹಾವಿದ್ಯಾಲಯ, ತೀರ್ಥಹಳ್ಳಿ.

31.01.2019 :– ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರವನ್ನು ರೋಟರಿ ಕ್ಲಬ್‌ನ ಸಹಭಾಗಿತ್ವದಲ್ಲಿ ನಡೆಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕಾಲೇಜಿನ 40 ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

02.02.2019 :– ಎಂ.ಕಾಂ. ವೇದಿಕೆಯ ವತಿಯಿಂದ Entrepreneurial Skill ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಅತಿಥಿಯಾಗಿ ಶ್ರೀ ನಿವೇದನ್ ನೆಂಪೆಯವರು ಉಪಸ್ಥಿತರಿದ್ದರು.

16.02.2019 :– ಡಾ.ಬಿ.ಎನ್.ರಂಗಪ್ಪ ದತ್ತಿನಿಧಿ ಉಪನ್ಯಾಸ ಕಾರ್ಯಕ್ರಮ. ಖ್ಯಾತ ಹೃದಯ ರೋಗ ತಜ್ಞರಾದ ಡಾ.ಸಾತ್ಯಕಿ ನಂಬಳ ಇವರು ಉಪನ್ಯಾಸ ನೀಡಿದರು.

27.02.2019 :– ಪ್ರತಿಭಾ ಪುರಸ್ಕಾರ ಸಮಾರಂಭ. ಕಾಲೇಜಿನ ರ್‍ಯಾಂಕ್ ವಿಜೇತರಿಗೆ ಮತ್ತು ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಣಾ ಸಮಾರಂಭ. ಡಾ.ಬೋಜ್ಯನಾಯ್ಕ್, ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ ಹಾಗೂ ಆಳ್ವಾಸ್ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀ ಮೋಹನ್ ಆಳ್ವ ಭಾಗವಹಿಸಿದ್ದರು.

28.02.2019 :– **ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಮ್ಯಾನೇಜಿಮೆಂಟ್** ಇವರು ಕಾಲೇಜಿನ ವಾಣಿಜ್ಯ ವಿದ್ಯಾರ್ಥಿಗಳಿಗೆ ವಾಣಿಜ್ಯ ವಿಷಯಾಧಾರಿತ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

02.03.2019 :– ಮಾಧಕ ವಸ್ತು ವಿರೋಧಿ ದಿನಾಚರಣೆ ಪ್ರಯುಕ್ತ ಸ್ಥಳೀಯ ನ್ಯಾಯಾಧೀಶರಾದ ಶ್ರೀಮತಿ ಅಖಿಲಾ ಹಾಗೂ ಪಬ್ಲಿಕ್ ಪ್ರಾಸೀಕ್ಯೂಟರ್ ಡಿ.ಬಿನು ಭಾಗವಹಿಸಿದ್ದರು.

08.03.2019:– ಕ್ರಿಕೆಟ್ ಪಂದ್ಯಾವಳಿಯನ್ನು ಕಾಲ್ರಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಇದೇ ದಿನ ಮಹಿಳಾ ದಿನಾಚರಣೆಯನ್ನು ಕಾಲೇಜಿನಲ್ಲಿ ಆಚರಿಸಲಾಯಿತು. ಅತಿಥಿಗಳಾಗಿ ಡಾ.ಬಿಂದು ನಂದಕಿಶೋರ್ ಹಾಗೂ ಶ್ರೀಮತಿ ಪ್ರಸಿಲ್ಲಾ ಪಿಂಟೋ ಅತಿಥಿಗಳಾಗಿ ಭಾಗವಹಿಸಿದ್ದರು.

21.03.2019 :– ಕಾಲೇಜಿನ ಆವರಣದಲ್ಲಿ ವಿಶೇಷವಾದ ರೀತಿಯಲ್ಲಿ ಹೋಳಿಹಬ್ಬದ ಆಚರಣೆಯನ್ನು ಹಮ್ಮಿಕೊಂಡಿದ್ದು. ಶ್ರೀ ಸುರೇಶ್, ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ತೀರ್ಥಹಳ್ಳಿ ಇವರು ಉದ್ಘಾಟಿಸಿದರು.

30.03.2019 :– ಸಾಂಪ್ರಾದಾಯಿಕ ದಿನಾಚರಣೆಯನ್ನು ತುಂಗಾ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀ ಕೌಲಾನಿ ಧರ್ಮಯ್ಯ ಉದ್ಘಾಟಿಸಿದರು.

06.04.2019 :– ಮತದಾನದ ಮಹತ್ವ ಕುರಿತು ಸಮನ್ವಯ ಕಾಶಿ ಮತ್ತು ತಂಡದವರು ಮಾಹಿತಿ ಮತ್ತು ತಾಂತ್ರಿಕ ಸಂಗತಿಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

**ವಿಶೇಷವಾಗಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೆಲವು ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದ್ದು ಅವುಗಳಲ್ಲಿ :**

1. **ಕಂಪ್ಯೂಟರ್ ಸರ್ಟಿಫಿಕೇಟ್ ಕೋರ್ಸ್:**

ನಮ್ಮ ವಿದ್ಯಾರ್ಥಿಗಳಿಗೆ ಓದಿನೊಂದಿಗೆ ಕಂಪ್ಯೂಟರ್ ಜ್ಞಾನವೂ ದೊರೆಯಬೇಕೆಂಬ ಆಶಯದಿಂದ 2018–19ನೇ ಸಾಲಿನಲ್ಲಿ ತುಂಗಾ ಕಂಪ್ಯೂಟರ್ ಸರ್ಟಿಫಿಕೇಟ್ ಕೋರ್ಸನ್ನು ಆರಂಭಿಸಲಾಗಿದೆ. ಕೇವಲ 1,600 ರೂಗಳಲ್ಲಿ ಒದಗಿಸುತ್ತಿರುವ ಈ ಕೋರ್ಸ್‌ಗೆ ಪಿಯು ಮತ್ತು ಪದವಿಯ ಸುಮಾರು 38 ವಿದ್ಯಾರ್ಥಿಗಳು ಸೇರಿದ್ದು ನಾಲ್ಕು ತಿಂಗಳ ಕೋರ್ಸ್ ಈಗ ಮುಕ್ತಾಯದ ಹಂತದಲ್ಲಿದೆ. ಇದಕ್ಕೆ ಬಿಇ ಕಂಪ್ಯೂಟರ್ ಪದವಿ ಪಡೆದ ಶ್ರೀಮತಿ ನಾಗಶ್ರೀ ಬಿ.ಎಸ್ ತರಬೇತಿ ನೀಡುತ್ತಿದ್ದಾರೆ.

2. **ತುಂಗಾ ಕಂಪ್ಯೂಟರ್ ಸೇವಾ ಕೇಂದ್ರ :**

ವಿದ್ಯಾರ್ಥಿಗಳು ಪ್ರವೇಶಕ್ಕೆ ಅರ್ಜಿ ಹಾಕುವುದು, ಫೀ ತುಂಬುವುದು, ಪ್ರಮಾಣ ಪತ್ರಗಳ ಬೇಡಿಕೆ, ವಿದ್ಯಾರ್ಥಿ ವೇತನವೇ ಮೊದಲಾದ ಎಲ್ಲವನ್ನೂ ಆನ್‌ಲೈನ್ ಮೂಲಕವೇ ಮಾಡಬೇಕಾಗಿದ್ದು ಕಳೆದ ಕೆಲವು ವರ್ಷಗಳಿಂದ ಅದಕ್ಕಾಗಿ ಪಟ್ಟಣದ ಕಂಪ್ಯೂಟರ್ ಸೇವಾ ಕೇಂದ್ರಗಳಲ್ಲಿ ಸರದಿ ಕಾಯುತ್ತಿದ್ದರು. ಇದನ್ನು ಮನಗಂಡು ಆಡಳಿತ ಮಂಡಳಿ 1 ಲಕ್ಷದ 75 ಸಾವಿರ ರೂಗಳ ವೆಚ್ಚದಲ್ಲಿ ಕಾಲೇಜಿನ ಆವರಣದಲ್ಲಿ ಕಟ್ಟಡವೊಂದನ್ನು ನಿರ್ಮಿಸಿ ಫಾರ್ಚೂನ್ ಟೆಕ್ನಾಲಜೀಸ್ ಇವರಿಗೆ ಗುತ್ತಿಗೆ ನೀಡಿದ್ದು ವಿದ್ಯಾರ್ಥಿಗಳಿಗೆ, ಅಧ್ಯಾಪಕ–ಸಿಬ್ಬಂದಿ ವರ್ಗದವರಿಗೆ ಬೇಕಾದ ಕಂಪ್ಯೂಟರ್, ಜೆರಾಕ್ಸ್, ಇಂಟರ್‌ನೆಟ್, ಬೈಂಡಿಂಗ್ ಹಾಗೂ ಅಗತ್ಯದ ಸ್ಟೇಷನರಿ ವಸ್ತುಗಳ ಮಳಿಗೆಯ ಮೂಲಕ ಸೇವೆ ಒದಗಿಸಲಾಗಿದೆ.

3. **ರೂಬ್ಯಾಂಕ್ ಯೋಜನೆ:** : ತಮಗೆಲ್ಲಾ ತಿಳಿದಿರುವಂತೆ ಫೀ, ಬಟ್ಟೆ, ಪುಸ್ತಕ ಹಾಗೂ ಬಸ್‌ಚಾರ್ಜ್‌ಗೆ ತೊಂದರೆ ಇರುವ ಹಲವು ವಿದ್ಯಾರ್ಥಿಗಳಿದ್ದಾರೆ. ಅಂತಹವರಿಗೆ ನೆರವು ನೀಡುವ ಸಲುವಾಗಿ ಕಾಲೇಜಿನ ವಿದ್ಯಾರ್ಥಿಗಳು, ಅಧ್ಯಾಪಕ–ಸಿಬ್ಬಂದಿ, ಆಡಳಿತ ಮಂಡಳಿ, ಪೋಷಕರು ಹಾಗೂ ಸಾರ್ವಜನಿಕರು ದಿನಕ್ಕೊಂದು ರೂಪಾಯಿ ನೀಡಿದರೆ ಅದೇ ಮಹಾ ದಾನವಾಗುತ್ತದೆ ಎಂಬ ಆಶಯದಿಂದ

‘ರೂಬ್ಯಾಂಕ್ ಯೋಜನೆ’ ಯನ್ನು ರೂಪಿಸಲಾಗಿದೆ. ಕಾಲೇಜಿನಲ್ಲಿ ರೂ ಬಾಕ್ಸ್ ಇದ್ದು ಆಸಕ್ತರು ವರ್ಷವೊಂದಕ್ಕೆ 365 ರೂಗಳನ್ನು ಹಾಕುವುದರ ಮೂಲಕ ತಿಂಗಳಿಗೊಮ್ಮೆ ಬಾಕ್ಸ್ ತೆರೆದು ಹಣವನ್ನು ಬ್ಯಾಂಕ್‌ಗೆ ಹಾಕಿ ಅರ್ಹ ವಿದ್ಯಾರ್ಥಿಗಳಿಗೆ ಚೆಕ್ ಮೂಲಕ ಹಣವನ್ನು ವಿತರಿಸಲಾಗುತ್ತದೆ. ಈ ವರ್ಷ 7 ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲ ಮಾಡಿಕೊಡಲಾಗಿದೆ.

4. **ಸಂಚಾರಿ ಬಸ್ ವ್ಯವಸ್ಥೆ:** ಇದು ಬಹುದಿನಗಳ ಕನಸು ಮತ್ತು ಬೇಡಿಕೆ. ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘವು ತಾನು ನೆರವು ನೀಡುವುದಾಗಿ ಘೋಷಿಸಿದ ತರುವಾಯ ಬಸ್ ತರಲು ಎಲ್ಲಾ ವ್ಯವಸ್ಥೆ ಮಾಡಿಕೊಂಡು 17 ಲಕ್ಷ ರೂಪಾಯಿಗಳ ವೆಚ್ಚದಲ್ಲಿ 42 ಸೀಟುಗಳ ಈಷೈರ್ ಕಂಪೆನಿಯ ಬಸ್ ಖರೀದಿಸಿ ಸಂಚಾರಕ್ಕೆ ಬಿಡಲಾಗಿದೆ. ವಿದ್ಯಾರ್ಥಿಗಳು ತಿಂಗಳ, ವರ್ಷದ ಪಾಸ್ ತೆಗೆದುಕೊಳ್ಳದಿದ್ದಾಗ ನಿತ್ಯ ಟಿಕೆಟ್ ಮೂಲಕ ಸೇವೆ ಒದಗಿಸಲಾಗುತ್ತಿದೆ. ಆದರೆ ಇದು ಲಾಭದಾಯಕವಾಗಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.

**2018 ಜನವರಿ ಯಿಂದ 2018ರ ಡಿಸೆಂಬರ್‌ವರೆಗೆ ಕಾಲೇಜಿನ ಬಸ್ಸಿನ ಜಮಾ ಖರ್ಚಿನ ವಿವರ**

| | |
|---|---|
| ಒಟ್ಟು ಆದಾಯ | 126300.00 |
| ದಿನದ ಸಂಗ್ರಹ | |
| ಒಟ್ಟು ಖರ್ಚು | 104675.00 |
| (ಖರ್ಚಿನ ಬಾಬತ್ತುಗಳು ಡೀಸೆಲ್, ರಿಪೇರಿ) | |
| **ಒಟ್ಟು ಉಳಿತಾಯ** | **21655.00** |

ಡ್ರೈವರ್ ಸಂಬಳ ಹೊರತು ಪಡಿಸಿ ಕಾಲೇಜಿನ ಬಸ್ಸಿನಿಂದ **ರೂ. 21655.00** ಉಳಿತಾಯವಾಗಿದೆ.

**6. ಕಾಲೇಜಿನಲ್ಲಿ ನಡೆದ ವಿಶೇಷ ಕಾರ್ಯಕ್ರಮಗಳ ವಿವರ :**

(ಒಟ್ಟು 50 ಪಾಯಿಂಟ್‌ಗಳು ಇದ್ದು ಸ್ಕಾನ್ ಮಾಡಿ ಇಡಲಾಗಿದೆ.)

**ಕೃತಜ್ಞತೆಗಳು**

ಕಾಲೇಜಿನ ಆಡಳಿತಾತ್ಮಕ ನಿರ್ವಹಣೆ ಹಾಗೂ ಕಾಲೇಜಿನಲ್ಲಿ ನಡೆಸಿದ ಪಠ್ಯ ಮತ್ತು ಪಠ್ಯೇತರ ಕಾರ್ಯ ಚಟುವಟಿಕೆಗಳಿಗೆ ಎಲ್ಲಾ ರೀತಿಯ ಸಹಕಾರ ಮತ್ತು ಮಾರ್ಗದರ್ಶನ ನೀಡಿದ ತುಂಗಾ ವಿದ್ಯಾವರ್ಧಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರುಗಳು ಮತ್ತು ಕಾಲೇಜಿನ ಸಹೋದ್ಯೋಗಿ ಮಿತ್ರರು, ಆಡಳಿತ ಸಿಬ್ಬಂದಿಗಳು, ಸಾರ್ವಜನಿಕರು, ವಿದ್ಯಾರ್ಥಿಗಳೆಲ್ಲರಿಗೂ, ಕುವೆಂಪು ವಿಶ್ವವಿದ್ಯಾನಿಲಯ ಮತ್ತು ಸರ್ಕಾರಕ್ಕೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಶೈಕ್ಷಣಿಕ ವರ್ಷದಲ್ಲಿ ಕಾಲೇಜು 3ನೇ ನ್ಯಾಕ್‌ಗೆ ಸಿದ್ಧವಾಗುತ್ತಿದೆ. ಕಳೆದ ವರ್ಷ ನ್ಯಾಕ್‌ಗೆ ಹೋಗಬೇಕಾಗಿದ್ದು ಸುವರ್ಣ ಮಹೋತ್ಸವದ ನಿಮಿತ್ತ ಸಾಧ್ಯವಾಗಿಲ್ಲ. ಈ ಸಂಬಂಧ ಜವಾಬ್ದಾರಿ ನಿರ್ವಹಿಸುವವರು ಈ ಕೆಳಗಿನಂತಿದೆ.

| ಸಮಿತಿಗಳು | ಕಾರ್ಯಾಧ್ಯಕ್ಷರು | ಸಂಚಾಲಕರು |
|---|---|---|
| ಕಾಲೇಜಿನ ಸಾಧನಾ ಸಂಗ್ರಹ ಸಮಿತಿ | ಶ್ರೀ ಟಿ.ಆರ್ ಅರುಣಾಚಲ 9448159355 | ಪ್ರೊ. ಬಿ.ಪ್ರಕಾಶ್‌ರಾವ್ 9448976866 |
| *ಸ್ಮರಣ ಸಂಚಿಕೆ ಸಮಿತಿ* | ಶ್ರೀ ದೇವಂಗಿ ಮನುದೇವ್ 9448766567 | ಪ್ರೊ ಎಲ್.ಕೆ ನಟರಾಜ್ 9731141809 |
| *ಹಳೆಯ ವಿದ್ಯಾರ್ಥಿಗಳ ಸಂಪರ್ಕ, ಸಂವಹನ ಹಾಗೂ ಪ್ರಚಾರ ಸಮಿತಿ* | ಶ್ರೀ ರಾಘವೇಂದ್ರ ಸೊಪ್ಪುಗುಡ್ಡೆ 9448255953 | ಪ್ರೊ ಕೆ.ಟಿ ರಮೇಶ್ 9448019225 |
| *ಗ್ರಂಥಾಲಯ ಪ್ರಸಾರ ಅಭಿವ್ಯಕ್ತಿ ಸಮಿತಿ* | ಶ್ರೀಮತಿ ಪ್ರೆಸಿಲ್ಲಾ ಪಿಂಟೋ 9448871122 | ಶ್ರೀ ಅನುದೀಪ್ ವೈ.ಎಸ್ 9591922526 |
| *ವಸ್ತುಪ್ರದರ್ಶನ ಸಮಿತಿ* | ಶ್ರೀ ಎಂ.ಎನ್ ರಮೇಶ್ 9986678421 | ಡಾ.ಎಚ್. ರಾಜಶೇಖರ್ 9483482328 |
| *ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಸಮಿತಿ* | ಶ್ರೀ ಶ್ರೀಕಾಂತ್ ಭಟ್.ಎಸ್ 9448329740 | ಪ್ರೊ ಎಂ. ನಾಗರಾಜ್ 8105706613 |
| *ಕ್ರೀಡಾ ಸಮಿತಿ* | ಶ್ರೀ ಬಿ.ಎಲ್. ಪ್ರಭಾಕರ ಹೆಗ್ಡೆ 9448159212 | ಶ್ರೀ ಟಿ.ಆರ್ ಶರತ್ 9480500648 |
| *ಪೋಷಕ – ಶಿಕ್ಷಕ ಸಮಿತಿ* | ಶ್ರೀ ಸರ್ಜಾ ರಾಜಗೋಪಾಲ್ 9480283819 | ಡಾ.ಬಿ.ಟಿ ರಾಮಪ್ಪ 9483482057 |
| *ಸಾಂಸ್ಕೃತಿಕ ಸಮಿತಿ* | ಶ್ರೀ ಡಾನ್ ರಾಮಣ್ಣ 9480924888 | ಡಾ.ಆರ್. ಕುಮಾರಸ್ವಾಮಿ 9916880684 |
| *ಕಾರ್ಯಕ್ರಮ ಸಂಯೋಜನಾ ಸಮಿತಿ* | ಶ್ರೀ ಕೊಳಾವರ ನಾರಾಯಣಮೂರ್ತಿ | ಪ್ರೊ ಬಿ.ಮಲ್ಲೇಶಿ ನಾಯ್ಕ್ |

| | | |
|---|---|---|
| | 9480022666 | 9448329939 |
| *ಲ್ಯಾಬ್ ಟು ವಿಲೇಜ್ & ಈವೆಂಟ್ಸ್  ಸಮಿತಿ* | ಡಾ.ಟಿ. ನಾರಾಯಣಸ್ವಾಮಿ<br>9448128726 | ಡಾ.ಬಿ.ಜಿ. ದಿವ್ಯಮಣಿ<br>9845295451 |
| *ಪ್ರಚಾರ ಮತ್ತು ವರದಿ ಸಮಿತಿ* | ಶ್ರೀ ಬಿ.ಕೆ ಹರ್ಷ<br>9448320050 | ಡಾ.ಕೆ.ಅಂಜನಪ್ಪ<br>9448438184 |
| *ಕ್ಯಾಂಪಸ್ ಮತ್ತು ಉದ್ಯಾನ ನಿರ್ವಹಣೆ ಸಮಿತಿ* | ಶ್ರೀಮತಿ ಶೈಲಾ ದಿನಮಣಿ<br>9449427156 | ಪ್ರೊ ಬಸವರಾಜ್<br>9448923390 |

ಕಾಲೇಜಿನ ಹುಣಮಟ್ಟ ನಿರ್ವಹಣೆ ತನ್ಮೂಲಕ ಗ್ರೇಡ್ ಪಡೆಯಲೇ ಬೇಕಾಗಿರುವ ಈ ನ್ಯಾಕ್ ಕಾರ್ಯದಲ್ಲಿ ತಾವೆಲ್ಲರೂ ಪಾಲ್ಗೊಂಡು ಸಹಕರಿಸಬೇಕೆಂದು ಕೀಓರುತ್ತಾ ಈ ವರದಿಯನ್ನು ಮುಗಿಸುತ್ತಿದ್ದೇನೆ.

ಸ್ಥಳ: ತೀರ್ಥಹಳ್ಳಿ — ಡಾ. ಬಿ ಗಣಪತಿ

ದಿನಾಂಕ:31.10.2019 — ಪ್ರಾಂಶುಪಾಲರು